

ಸಿಸಿಲಿ, ಮಗ ಥಾಮಸ್ ಮೋಹನ್ ಮತ್ತು ಮಗಳು ಅನ್ನು ಅವರ ಬೆಂಬಲವನ್ನು ಮೋಹನ್ ನೆನಪಿಸಿಕೊಳ್ಳುತ್ತಾನೆ. ಮಡದಿಯ ಬೆಂಬಲವನ್ನು ಮರೆಯುವಂತೆಯೇ ಇಲ್ಲ ಎನ್ನುತ್ತಾರೆ. ಮಗ ಥಾಮಸ್ ಮೋಹನ್ ಕೂಡ ಅಪ್ಪನ ಹಾದಿಯಲ್ಲಿ ನಡೆಯುವ ಉತ್ಸಾಹದಲ್ಲಿದ್ದಾರೆ. ಮೋಹನ್‌ರ ಸಹೋದರರಾದ ಥಾಮಸ್ ವಿಜಯನ್ ಮತ್ತು ಥಾಮಸ್ ರಾಜನ್ ಕೂಡ ನುರಿತ ವನ್ಯಜೀವಿ ಛಾಯಾಗ್ರಾಹಕರೇ ಆಗಿದ್ದಾರೆ.

ಮೋಹನ್ ಅವರ ಛಾಯಾಗ್ರಹಣ ಪಯಣಕ್ಕೀಗ ಹದಿನೇಳು ವರ್ಷಗಳ ಪ್ರಾಯ. ಇಷ್ಟು ವರ್ಷಗಳ ಅವರ ವನ್ಯಜೀವಿ ಛಾಯಾಗ್ರಹಣದ ಹಾದಿ ಬಹಳ ಆಸಕ್ತಿದಾಯಕ. ಈಗಲೂ ವನ್ಯಜೀವಿಗಳೆಂದರೆ ಅವರಿಗೆ ಇನ್ನಿಲ್ಲದ ಪ್ರೀತಿ. ಅವುಗಳ ವಿವಿಧ ಭಂಗಿಗಳನ್ನು ತಮ್ಮ ಕ್ಯಾಮೆರಾದಲ್ಲಿ ದಾಖಲಿಸುವ ಹೆಬ್ಬಯಕೆ. ಇತ್ತೀಚೆಗೆ ಹನ್ನೆರಡು ದಿನ ಹಿಮಾಲಯದ ಪ್ರವಾಸವನ್ನು ಮಾಡಿಬಂದಿದ್ದಾರೆ. ಅಲ್ಲಿಗೆ ಹೋಗುವಾಗ ತಲೆಯಲ್ಲಿ ಇದ್ದದ್ದು ಎರಡೇ ಪ್ರಾಣಿಗಳು: ಕೆಂಪು ಪಾಂಡ (**Red Panda**) ಮತ್ತು ಅಳಿವಿನಂಚಿಗೆ ಸರಿದಿರುವ ಕಂದು ಬಣ್ಣದ ಮಂಗಟ್ಟೆ (**Rufous Hornbill**). ಪೂರ್ವ ಹಿಮಾಲಯದಲ್ಲಿ ವಾಸಿಸುವ ವಿಶಿಷ್ಟ ಪ್ರಾಣಿ ಕೆಂಪು ಪಾಂಡ, ಸಂತತಿ ನಾಶದ ಹಾದಿಯಲ್ಲಿರುವ ಅಪರೂಪದ ಮಾಂಸಾಹಾರಿ ಪ್ರಾಣಿ.



ವನ್ಯಜೀವಿ ಛಾಯಾಗ್ರಹಣದಲ್ಲಿ ಯಾವುದೇ ಒಂದು ಪ್ರಾಣಿ ಅಥವಾ ಪಕ್ಷಿಯನ್ನು ಸೆರೆ ಹಿಡಿಯುವಾಗ ನಮಗೆ ಬೇಕಾದ ಭಂಗಿ ಸಿಗದೇ ಇರಬಹುದು, ಬೇಕಾದ ಪ್ರಾಣಿ ಕಾಣದೆ ನಿರಾಶರಾಗಬಹುದು. ಇಂಥ ಸಂದರ್ಭಗಳು ಪದೇ ಪದೇ ಒದಗುವುದು ಸಾಮಾನ್ಯ. ಛಾಯಾಗ್ರಾಹಕನಿಗೆ ಕೆಲವು ನಿರೀಕ್ಷೆಗಳಿರುತ್ತವೆ. ಅವು ಕೈಗೂಡದಿರಬಹುದು. ಆಸಕ್ತಿ, ಛಲ, ತನ್ಮಯತೆಯ ಜೊತೆಗೆ ಅದೃಷ್ಟವೂ ಕೂಡಿ ಬರಬೇಕು! ಅಂಥ ಅದೃಷ್ಟದ ಬೆಂಬಲ ಮೋಹನ್ ಥಾಮಸ್ ಅವರಿಗಿದೆ. ಆದರೆ, ಅದು ಹಲವಾರು ವರ್ಷಗಳ ಪರಿಶ್ರಮದಿಂದಲೇ ಸಾಧ್ಯವಾಗಿರುವಂಥದ್ದು. ವನ್ಯಜೀವಿ ಛಾಯಾಗ್ರಹಣ ಮಾತ್ರವಲ್ಲದೆ ಮ್ಯಾಕ್ರೋ ಮತ್ತು ನಿಸರ್ಗ ಛಾಯಾಗ್ರಹಣದಲ್ಲೂ (**Nature and Landscape**) ಅವರದು ಎತ್ತಿದ ಕೈ. ಆದರೆ, ವನ್ಯಜೀವಿ ಛಾಯಾಗ್ರಹಣಕ್ಕೇ ಅವರ ಮೊದಲ ಪ್ರಾಶಸ್ತ್ಯ.

## ಅರಸಿ ಬಂದ ಗೌರವಗಳ ಸಾಲು

2015 ರಲ್ಲಿ ವನ್ಯಜೀವಿ ಛಾಯಾಗ್ರಹಣಕ್ಕಾಗಿ 'ಮುತ್ತುಕುಳಂ ರಾಘವನ್ ಪಿಳ್ಳೈ ಪ್ರಶಸ್ತಿ' ಮತ್ತು ಡಿಪಿಪಿ ಮನ್ಫ್ರಾಟೋ ರಾಷ್ಟ್ರೀಯ ಮಟ್ಟದ 'ಅತ್ಯುತ್ತಮ ವನ್ಯಜೀವಿ ಛಾಯಾಗ್ರಾಹಕ' ಪ್ರಶಸ್ತಿ ಮೋಹನ್ ಥಾಮಸ್ ಅವರನ್ನು ಅರಸಿಕೊಂಡು ಬಂದಿವೆ. ಕಬಿನಿ, ಬಂಡೀಪುರ ಮೀಸಲು ಅರಣ್ಯ, ಮೂನಾರ್, ತೇಕಡಿ, ಮುಂತಾದ ಕಡೆಗಳಲ್ಲಿ ಮೋಹನ್ ಥಾಮಸ್ ಅವರ ವನ್ಯಜೀವಿ ಛಾಯಾಚಿತ್ರ ಪ್ರದರ್ಶನ ನಡೆದಿದೆ. ಕೇರಳದ ಲಲಿತ ಕಲಾ ಅಕಾಡೆಮಿ ಕೊಚ್ಚಿಯಲ್ಲಿ ನಡೆಸಿದ 'ಥರ್ಡ್ ಐ' ವನ್ಯಜೀವಿ ಛಾಯಾಗ್ರಹಣ ಪ್ರದರ್ಶನದಲ್ಲಿ ಥಾಮಸ್ ಅವರ ಛಾಯಾಚಿತ್ರಗಳು ಪ್ರದರ್ಶನಗೊಂಡು ಮಾನ್ಯತೆ ಗಳಿಸಿವೆ. ಹಲವಾರು ವನ್ಯಜೀವಿ ಮ್ಯಾಗಜಿನ್‌ಗಳಲ್ಲಿ ಥಾಮಸ್ ಅವರ ಚಿತ್ರಗಳು ಮುಖಪುಟ ಚಿತ್ರಗಳಾಗಿ ಅಲಂಕೃತವಾಗಿವೆ.

ವನ್ಯಜೀವಿ ಛಾಯಾಗ್ರಹಣ ಮಾತ್ರವಲ್ಲದೆ, ಹಲವಾರು ವನ್ಯಜೀವಿ ಸಂರಕ್ಷಣಾ ಕಾರ್ಯಕ್ರಮಗಳಲ್ಲೂ ಮೋಹನ್ ಭಾಗವಹಿಸಿದ್ದಾರೆ. ಅದರಲ್ಲಿ ಮುಖ್ಯವಾದದ್ದು ಬಂಡೀಪುರದಲ್ಲಿ ನಡೆದ ಕಿಂಗ್ ಕೋಬ್ರಾ ಆಪರೇಷನ್. ಶಾಲೆಯ ಮಕ್ಕಳಿಗೆ ಪರಿಸರ ಪಾಠ ಮಾಡಿದ್ದಾರೆ. ವನ್ಯಜೀವಿ ಛಾಯಾಗ್ರಹಣ, ಮತ್ತು ಪರಿಸರದ ಬಗ್ಗೆ ಪ್ರಾತ್ಯಕ್ಷಿಕೆಗಳನ್ನು ನಡೆಸಿಕೊಟ್ಟಿದ್ದಾರೆ.

ಕೋವಿಡ್ 19 ಸಾಂಕ್ರಾಮಿಕ ಸಂದರ್ಭದಲ್ಲಿ ಸಮಾಜದ ಅಸಹಾಯಕ, ದುರ್ಬಲ ವರ್ಗಗಳಿಗೆ ನೆರವಾಗುವ ನಿರ್ಧಾರ ತಳೆದ ಮೋಹನ್, ಸಮಾನ ಮನಸ್ಕ ವನ್ಯಜೀವಿ ಫೋಟೋಗ್ರಫಿ ಗೆಳೆಯರನ್ನು ಸೇರಿಸಿಕೊಂಡು 'ಪಿಕ್ಸ್4ಕಾಸ್' ಎಂಬ ಸಂಸ್ಥೆಯನ್ನು ಆರಂಭಿಸಿದರು. ನಗರಗಳ ಸರ್ಕಾರಿ ಆಸ್ಪತ್ರೆಗಳಲ್ಲಿ ದಾಖಲಾದ ರೋಗಿಗಳು ಹಾಗೂ ಅವರ ಕಡೆಯ ಬಂಧುಗಳು ಹಾಗೂ ವಲಸೆ ಕಟ್ಟಡ ಕಾರ್ಮಿಕರಿಗೆ ಆಹಾರದ ಪ್ಯಾಕೆಟ್‌ಗಳನ್ನು ವಿತರಿಸಿದರು. ಪರಿಸರ ಸಂರಕ್ಷಣೆ ಮತ್ತು ಸಂಕಷ್ಟದಲ್ಲಿರುವ ಜನರಿಗೆ ನೆರವಾಗುವ ಮೂಲ ಉದ್ದೇಶದಿಂದ ಪ್ರಾರಂಭವಾದ 'ಪಿಕ್ಸ್4ಕಾಸ್' ಸಂಸ್ಥೆ ವನ್ಯಧಾಮಗಳಲ್ಲಿ ಕಾರ್ಯನಿರ್ವಹಿಸುವ ವಾಹನ ಚಾಲಕರು, ನ್ಯಾಚುರಲಿಸ್ಟ್‌ಗಳು ಮತ್ತು ವನಪಾಲಕರಿಗೆ ಸಹ ನೆರವಿನ ಹಸ್ತ ಚಾಚುತ್ತಿದೆ.

ವನ್ಯಜೀವಿ ಛಾಯಾಗ್ರಹಣವು ಮೋಹನ್ ಅವರಿಗೆ ಯಾವತ್ತೂ ಗುರುತಿಸುಕೊಳ್ಳುವಿಕೆ ಅಥವಾ ಮಾನ್ಯತೆ ಗಳಿಸುವ ವಿಷಯವಾಗಿರಲಿಲ್ಲ. ವೈಯಕ್ತಿಕ ಆಸಕ್ತಿ ಮತ್ತು ಸಂತೋಷಕ್ಕಾಗಿ ಮಾತ್ರ ವನ್ಯಜೀವಿ ಛಾಯಾಗ್ರಹಣದಲ್ಲಿ ಅವರು ತೊಡಗಿಕೊಂಡವರು. 'ಯಾರು ತಮ್ಮ ಕೆಲಸವನ್ನು ಹೃದಯಪೂರ್ವಕವಾಗಿ ನಿರ್ವಹಿಸುತ್ತಾರೋ ಅವರಿಗೆ ಜನರ ಸ್ವೀಕಾರ ಮತ್ತು ಮಾನ್ಯತೆ ಸಹಜವಾಗಿಯೇ ಒಲಿದು ಬರುತ್ತದೆ' ಎಂಬ ನಂಬಿಕೆ ಅವರದು.

**ಮೋಹನ್ ಅವರ ಸಂಪರ್ಕ ಸಂಖ್ಯೆ:**
**9844262000**
**ವೆಬ್‌ಸೈಟ್ ವಿಳಾಸ:**
**mohanthomasphotography.com**
**ಪ್ರತಿಕ್ರಿಯಿಸಿ: feedback@sudha.co.in**



ಚಂಡವ್ಯಾಘ್ರನ ದೃಷ್ಟಿಯುದ್ಧ!